## ಹಳೇ ಜೋಡಿ- ಹೊಸ ಆಟ

ಸಲೀಂ- ಜಾವೇದ್ ಜೋಡಿ ಮತ್ತೆ ಒಂದಾಗಿದೆ. ಶೀಘ್ರದಲ್ಲೇ ಇನ್ನೊಂದು ಹೊಸ ಸಿನಿಮಾಕ್ಕೆ ಈ ಜೋಡಿ ಡೈಲಾಗ್ ಬರೆಯುವ ದಿನಗಳು ದೂರವಿಲ್ಲ. ಹಾಗೆಂದು ಸ್ವತಃ ಸಲೀಂ ಖಾನ್ ಮತ್ತು ಜಾವೇದ್ ಅಖ್ತರ್ ಮಾಧ್ಯಮಗಳ ಮುಂದೆ ಸಾರಿದ್ದಾರೆ.

70ರ ದಶಕದಲ್ಲಿ ಬಾಲಿವುಡ್ ಬೆಳ್ಳಿಪರದೆಯ ಮೇಲೆ ಹೊಸ ಸಂಚಲನ ಉಂಟು ಮಾಡಿದ ಜೋಡಿಯಿದು. ಒಂದರ ಹಿಂದೆ ಒಂದರಂತೆ ಈ ಜೋಡಿ ಚಿತ್ರಕಥೆ ಬರೆದ ಸಿನಿಮಾಗಳು ಸೂಪರ್ ಹಿಟ್ ಆಗಿದ್ದವು. 1971ರಲ್ಲಿ



ಬಂದ 'ಅಂದಾಜ್', 73ರಲ್ಲಿ ಬಂದ 'ಯಾದೋಂ ಕಿ ಬಾರಾತ್', 'ಜಂಜೀರ್', 75ರಲ್ಲಿ ಬಂದ 'ದೀವಾರ್' ಮತ್ತು 'ಶೋಲೇ', 78ರಲ್ಲಿ ಬಂದ 'ಡಾನ್' ಮತ್ತು 'ತ್ರಿಶೂಲ್', 82ರಲ್ಲಿ ಬಂದ 'ಶಕ್ತಿ', 87ರಲ್ಲಿ ಬಂದ 'ಮಿಸ್ಟರ್ ಇಂಡಿಯಾ'- ಹೀಗೆ ಹಿಂದಿ ಚಿತ್ರರಂಗದ ದಿಕ್ಕುದೆಸೆಯನ್ನು ಬದಲಿಸಿದ ಹಲವಾರು ಚಿತ್ರಗಳ ಸೂಪರ್ ಸ್ಟಾರ್ ಜೋಡಿಯಿದು. ಅಮಿತಾಭ್, ಧರ್ಮೇಂದ್ರ, ದಿಲೀಪ್ ಕುಮಾರ್, ಅನಿಲ್ ಕಪೂರ್, ವಿನೋದ್ ಖನ್ನಾ- ಹೀಗೆ ತಾರೆಯರ ಇಮೇಜ್ ಬದಲಾಯಿಸುವ ಮಾಂತ್ರಿಕ ಶಕ್ತಿ ಈ ಜೋಡಿಯ ಚಿತ್ರಕಥೆ, ಸಂಭಾಷಣೆಯಲ್ಲಿತ್ತು.

15 ವರ್ಷಗಳ ಕಾಲ ಬಾಲಿವುಡ್‌ಅನ್ನು ಆಳಿದ ಈ ಜೋಡಿ ಕ್ಷುಲ್ಲಕ ಕಾರಣವೊಂದಕ್ಕೆ ಬೇರ್ಪಟ್ಟದ್ದು ಇತಿಹಾಸ. ಮಿಸ್ಟರ್ ಇಂಡಿಯಾ ಚಿತ್ರಕ್ಕೆ ಅಮಿತಾಭ್ ಬಚ್ಚನ್ ಅವರನ್ನು ನಿರ್ಮಾಪಕರು ಅಭಿನಯಿಸಲು ಕರೆದರಂತೆ. ಆದರೆ ಅಮಿತಾಭ್ ನಿರಾಕರಿಸಿದರಂತೆ. ಅದರಿಂದ ಸಿಟ್ಟಿಗೆದ್ದ ಜಾವೇದ್ ಅಖ್ತರ್, ಇನ್ನು ಮುಂದೆ ಅಮಿತಾಭ್ ಜತೆ ಕೆಲಸ ಮಾಡುವುದು ಬೇಡ ಅಂದರಂತೆ. ಆದರೆ ಸಲೀಂ ಖಾನ್ ಈ ವಾದವನ್ನು ಒಪ್ಪಲಿಲ್ಲವಂತೆ. ಅದೇ ಜೋಡಿ ಬೇರ್ಪಡುವಿಕೆಗೆ ಕಾರಣವಾಯಿತಂತೆ!

ಆದರೆ ಈಗ 26 ವರ್ಷಗಳ ಬಳಿಕ ಈ ಜೋಡಿ ಒಂದಾಗಲು ಅಪೂರ್ವ ಲಖಿಯಾ ಎಂಬ ನಿರ್ಮಾಪಕ ಕಾರಣರಾಗಿದ್ದಾರೆ. ಅಪೂರ್ವ ಲಖಿಯಾ ಇತ್ತೀಚೆಗೆ 'ಜಂಜೀರ್' ಚಿತ್ರದ ರಿಮೇಕ್ ಮಾಡಿದರು. ಆಗ ಸಲೀಂ-ಜಾವೇದ್ ಜೋಡಿ, 'ಇದು ನಮ್ಮ ಹಳೇ ಚಿತ್ರದ ಹಕ್ಕು ಉಲ್ಲಂಘನೆ. ನಮ್ಮನ್ನು ಕೇಳದೆ ಚಿತ್ರ ಮಾಡಿದ್ದಾರೆ. ಪರಿಹಾರ ಕೊಡಿಸಿ' ಎಂದು ಕೋರ್ಟ್ ಮೆಟ್ಟಿಲು ಹತ್ತಿದರು. ಕೋರ್ಟಿನಲ್ಲಿ ಈ ಜೋಡಿ ಸತತ 2-3 ಗಂಟೆಗಳ ಕಾಲ ಒಟ್ಟಿಗೇ ಕುಳಿತುಕೊಂಡದ್ದೇ ಮತ್ತೆ ರಾಜಿಗೆ ದಾರಿಯಾಗಿದೆ. ಕೋರ್ಟಿನಲ್ಲಿ ಈ ಜೋಡಿಗೆ ಭಾರೀ ಮೊತ್ತದ ಪರಿಹಾರವೂ ಸಿಕ್ಕಿದೆ. ಜತೆಗೆ ಹೊಸ ಸಿನಿಮಾದ ಐಡಿಯಾವೂ ಬಂದಿದೆ.

## ಕ್ರಿಶ್-3 ದಾಖಲೆ

ಕ್ರಿಶ್-3 ಬಿಡುಗಡೆಯಾದ ಮೊದಲ 7 ದಿನಗಳಲ್ಲಿ 200 ಕೋಟಿ ರೂಪಾಯಿ ಕಲೆಕ್ಷನ್‌ನ ದಾಖಲೆ ಮುರಿದಿದೆ. ಚಿತ್ರ ಅಷ್ಟು ಚೆನ್ನಾಗಿಲ್ಲ ಎಂದು ವಿಮರ್ಶಕರು ಷರಾ ಬರೆದರೂ, ಹೃತಿಕ್ ರೋಶನ್ ಮತ್ತು ಅಪ್ಪ ರಾಕೇಶ್ ರೋಶನ್ ಖುಷಿಗೆ ತೊಂದರೆ ಉಂಟಾಗಿಲ್ಲ. ಈ ಮಧ್ಯೆ ಮಧ್ಯಪ್ರದೇಶದ ಲೇಖಕನೊಬ್ಬ ಬಾಂಬೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ 'ಇದು ನನ್ನ ಕಥೆಯನ್ನು ಕದ್ದದ್ದು. ಚಿತ್ರ ಬಿಡುಗಡೆಯನ್ನು ತಡೆಹಿಡಿಯಿರಿ' ಎಂದಿದ್ದಾನೆ. ನವೆಂಬರ್ 1ರಂದು ಚಿತ್ರ ಬಿಡುಗಡೆಗೆ ಎಲ್ಲ ಸಿದ್ಧವಾದ ಬಳಿಕ ಬಂದ ಅರ್ಜಿಯನ್ನು ಕೋರ್ಟ್ ತಿರಸ್ಕರಿಸಿದೆ. ಮೊದಲು ಚಿತ್ರ ಬಿಡುಗಡೆಯಾಗಲಿ; ಅರ್ಜಿಯ ವಿಚಾರಣೆ ದೀಪಾವಳಿ ಬಳಿಕ ನೋಡೋಣ ಎಂದಿದ್ದಾರೆ ನ್ಯಾಯಾಧೀಶರು. 'ಇತ್ತೀಚೆಗೆ ಸುಖಾಸುಮ್ಮನೆ ಜನ ಕೋರ್ಟಿಗೆ ಅರ್ಜಿ ಹಾಕುತ್ತಾರೆ. ನಾನೂ ಕಾನೂನೂ ಹೋರಾಟ ನಡೆಸುತ್ತೇನೆ' ಎಂದಿದ್ದಾರೆ ರಾಕೇಶ್ ರೋಶನ್. ಕ್ರಿಶ್-3 ಯ ಸಿನಿಮಾ ಬಗ್ಗೆ ಏನೇ ಭಿನ್ನಮತ ಇದ್ದರೂ 'ರಘುಪತಿ ರಾಘವ ರಾಜಾರಾಂ' ರಿಮಿಕ್ಸ್ ಹಾಡಂತೂ ಸಖತ್ತು ಜನಪ್ರಿಯವಾಗಿದೆ.

■ ಬಿಂದು

